ಕ್ರಮ ಸಂಖ್ಯೆ	ತಾಲ್ಲೂಕು ಕೇಂದ್ರದ ಹೆಸರು	ವಿತರಿಸಲಾಗಿರುವ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳ ಸಂಖ್ಯೆ
1	2	3
1.	ತುಮಕೂರು	2078
2.	ಕುಣಿಗಲ್	2395
3.	ಗುಬ್ಬಿ	1524
4.	ತುರುವೇಕೆರೆ	910
5.	ತಿಪಟೂರು	1456
6.	ಚಿಕ್ಕನಾಯಕನಹಳ್ಳಿ	1571
7.	ಶಿರಾ	1664
8.	ಪಾವಗಡ	2220
9.	ಕೊರಟಗೆರೆ	1598
10.	ಮಧುಗಿರಿ	2210
	ಒಟ್ಟು	17624

ಆ. ತುಮಕೂರು ಜಿಲ್ಲೆಯೂ ಸೇರಿದಂತೆ ರಾಜ್ಯ ದಾದ್ಯಂತ ವಿತರಣೆಗಾಗಿ ಬಡತನ ರೇಖೆ ಕೆಳಗಿನ ಕುಟುಂಬಗಳನ್ನು ಗುರುತಿಸುವ ಮನೆ-ಮನೆ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ಸಮೀಕ್ಷೆ ಪೂರ್ಣವಾದ ನಂತರ ಕುಟುಂಬಗಳ ಸಂಖ್ಯೆ ಲಭ್ಯವಾಗುವುದು.

ಇ. ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಸರ್ವೆ ಕಾರ್ಯವು ಮುಗಿದ ನಂತರ ಅರ್ಹ ಕುಟುಂಬಗಳ ಬಗ್ಗೆ ಮಾಹಿತಿಯು ದೊರೆಯುವುದು.

ಇ. ತುಮಕೂರು ನಗರ ಅನೌಪಚಾರಿಕ ಪಡಿತರ ವ್ಯಪ್ತಿಗೆ ಹೊಸದಾಗಿ ಸೇರ್ಪಡೆಯಾದ 22 ಹಳ್ಳಿಗಳನ್ನು ಹಳದಿ ಪಡಿತರ ಚೀಟಿ ಯೋಜನೆಯಡಿ ಸೇರ್ಪಡೆ ಮಾಡಿ ಕೊಳ್ಳಲಾಗಿರುತ್ತದೆ ಮತ್ತು ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ.

ಈ. ತುಮಕೂರು ಪಟ್ಟಣದ ಪೋಷಿತ ಮತ್ತು ಅಪೋಷಿತ ಕೊಳಚೆ ಪ್ರದೇಶಗಳಲ್ಲಿ ನೈಜ ಬಡತನ ರೇಖೆಯ ಕೆಳಗಿನ ಕುಟಂಬಗಳನ್ನು ಗುರುತಿಸಲು ಸಮೀಕ್ಷೆ ಜಾರಿಯಲ್ಲಿದೆ. ಸಮೀಕ್ಷೆಯ ನಂತರ ಸದರಿ ಪ್ರದೇಶಗಳಲ್ಲಿರುವ ಆರ್ಬಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ವಿತರಿಸಲಾಗುವುದು.

ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಕುರಿತು

204 (1486)- ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್.ಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಾಂಡವಪುರ ಉಪ ವಿಭಾಗದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರುಗಳಿಗೆ ಯಾವಾಗ ಹಣಪಾವತಿ ಮಾಡಲಾಗುವುದು ಹಣ ಬಿಡುಗಡೆಯಾಗಿದೆಯೇ? ಈ ವರ್ಷ ಕಾರ್ಖಾನೆ ಪ್ರಾರಂಭಿಸಲಾಗುವುದೆ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ. ಕಾರ್ಖಾನೆಯು ರೂ.5.60 ಕೋಟಿಗಳನ್ನು ರೈತರಿಗೆ ಪಾವತಿಸಿರುತ್ತದೆ. ಜುಲೈ 2002ರ ಅಂತ್ಯದೊಳಗೆ ಕಬ್ಬು ನುರಿಸುವಿಕೆಯನ್ನು ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಕಾರ್ಖಾನೆಯು ಕಬ್ಬು ಅಭಿವೃದ್ಧಿ ಅಯುಕ್ತರು ಹಾಗೂ ಸಕ್ಕರೆ ನಿರ್ದೇಶಕರಿಗೆ ವರದಿ ಮಾಡಿರುತ್ತದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇದರ ಸದಸ್ಯತ್ವದ ಪುನರ್ ವರ್ಗೀಕರಣ

206 (1780)- ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ, ಇದರ ಸದಸ್ಯತ್ವದ ಪುನರ್ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರು ಹೊರಡಿಸಿರುವ ದಿ: 4-8-88ರ ಮತ್ತು 6-8-88ರ ಆದೇಶಗಳು ಯಥಾವತ್ತಾಗಿ ಜಾರಿ ಆಗದೇ ಇರುವುದು ನಿಜವೇ:

ಆ. ಹೌದಾದಲ್ಲಿ ಕಾರಣಗಳೇನು?

ಇ. ಯಥಾವತ್ತಾಗಿ ಜಾರಿ ಆದಲ್ಲಿ ಸರ್ಕಾರಕ್ಕೆ ಕಾರ್ಖಾನೆಗೆ ಷೇರುದಾರರಿಗೆ ಮತ್ತು ಎನ್.ಆರ್.ಡಿ.ಖಾತೆ ಹೊಂದಿರುವ "ಇ" ತರಗತಿ ಸದಸ್ಯರುಗಳಿಗೆ ಆಗುವ ಸಾಧಕ-ಭಾದಕಗಳೇನು?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ. ಕಾರ್ಖಾನೆಯು ದಿ:4-8-88 ಮತ್ತು 6-8-88ರ ಸಕ್ಕರೆ ನಿರ್ದೇಶಕರ ಆದೇಶಗಳನ್ನು ಸಹಕಾರ ಸಂಘಗಳ ಕಾಯ್ದೆಗೆ ನಿಯಮಾವಳಿ ಮತ್ತು ಕಾರ್ಖಾನೆ ಬೈಲಾಗಳಿಗನುಗುಣವಾಗಿ ಜಾರಿಗೊಳಿಸಿರುತ್ತದೆ.

ಆ. ಮೇಲಿನ (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಸಾಧಕ-ಭಾದಕಗಳನ್ನು ಊಹಿಸಲು ಬರುವುದಿಲ್ಲ.

ರಾಜ್ಯದಲ್ಲಿ ನುಸಿಪೀಡೆ ಔಷಧ ಕುರಿತು

207 (1695)- ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a. ರಾಜ್ಯದಲ್ಲಿ ಸಿಂಪರಣೆಯಾದ ನುಸಿಪೀಡೆ ಔಷಧದ ಪ್ರಮಾಣವೆಷ್ಟು?ಹಾಗೂ ಅದರ ಮೌಲ್ಯವೆಷ್ಟು?

b. ಪ್ರತಿ ತಾಲ್ಲೂಕುವಾರು ಸಿಂಪರಣೆಯಾದ ಔಷಧದ ಪ್ರಮಾಣವೆಷ್ಟು?

c. ಸಿಂಪರಣೆಯಿಂದ ನಾಶವಾದ ತೆಂಗಿನ ಗಿಡಗಳ ಸಂಖ್ಯೆ ಹಾಗೂ ಗಾಸಿಗೊಳಗಾದ ರೈತರ ಸಂಖ್ಯೆ ಎಷ್ಟು?

d. ಸಂಕಷ್ಟಕ್ಕೊಳಗಾದ ರೈತರಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು?

e. ಅವೈಜ್ಞಾನಿಕ ಸಿಂಪರಣೆಗೆ ಶಿಪಾರಸ್ಸು ಮಾಡಿದ ಅಧಿಕಾರಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮವೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

a. 2.31ಲಕ್ಷ ಲೀಟರ್ ಔಷಧಿ ಖರೀದಿಸಲಾಗಿದ್ದು ಇದರ ಮೌಲ್ಯ ರೂ. 960 ಲಕ್ಷಗಳು. ಈ ಪೈಕಿ 1.23ಲಕ್ಷ ಲೀಟರ್ ಔಷಧಿಯಿಂದ ಉಪಚರಿಸಲಾಗಿದೆ.